ಶ್ರೀ ಡಿ.ವಿ. ಸದಾನಂದ ಗೌಡ : ದಯಮಾಡಿ ಇದನ್ನು ಕಳಿಸಿಕೊಡುತ್ತೇನೆ.

MR. SPEAKER : You consider that.

ಕೆ.ಜಿ.ಎಫ್. ಪೋಲೀಸ್ ಠಾಣೆ ಕುರಿತು.

81 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಡಿಸೆಂಬರ್ 94ರಿಂದ ಇಲ್ಲಿಯವರೆಗೆ ನಡೆದಿರುವ ಕೊಲೆ, ಅಪರಾಧ, ದರೋಡೆ, ಕಳ್ಳತನ, ಸುಲಿಗೆ, ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳ ಜನರ ಮೇಲಿನ ದೌರ್ಜನ್ಯ, ಮತೀಯ ಗಲಭೆ, ಗಂಧದಮರದ ಕಳ್ಳಸಾಗಣೆ, ಕಳ್ಳಭಟ್ಟಿ ಮಧ್ಯ ಪ್ರಕರಣಗಳೆಷ್ಟು ಮತ್ತು ಅವುಗಳಲ್ಲಿ ಎಷ್ಟು ಕೆ.ಜಿ.ಎಫ್ ಪೋಲೀಸ್ ಠಾಣೆ ವ್ಯಾಪ್ತಿಗೆ ಬರುತ್ತದೆ?

ಆ) ಕೆ.ಜಿ.ಎಫ್.ನಲ್ಲಿ ಪೋಲೀಸ್ ಕೊರತೆ ಇರುವುದು ನಿಜವೇ, ಹಾಗಿದ್ದಲ್ಲಿ ಖಾಲಿ ಹುದ್ದೆಗಳನ್ನು ತುಂಬದಿರಲು ಕಾರಣವೇನು?

ಇ) ಪೋಲೀಸ್ ಕಾನ್ಸ್‌ಟೇಬಲಗಳು ಮತ್ತು ಹೆಡ್ ಕಾನ್ಸ್‌ಟೇಬಲ್‌ಗಳು ದಶಕಗಳಿಂದ ವರ್ಗಾವಣೆಯಿಲ್ಲದೆ ಕೆ.ಜಿ.ಎಫ್. ಪೋಲೀಸ್ ಠಾಣೆಗಳಲ್ಲಿಯೇ ಕೆಲಸ ನಿರ್ವಹಿಸುತ್ತಿರುವುದು ನಿಜವೇ, ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು).

ಅ) ಅನುಬಂಧ ಲಗತ್ತಿಸಿದೆ.

ಆ) ಕೆ.ಜಿ.ಎಫ್. ಪೋಲೀಸ್ ಸಿಬ್ಬಂದಿ ಬಲದಲ್ಲಿ ಕಡಿತವಾಗಿಲ್ಲ. ಪೋಲೀಸ್ ಸಿಬ್ಬಂದಿ ರಿಕ್ತ ಸ್ಥಾನಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಹೌದು. ಕೋಲಾರ ಚಿನ್ನದ ಗಣಿ ಪ್ರದೇಶಧಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೆಡ್ ಕಾನ್ಸ್‌ಟೇಬಲ್ ಮತ್ತು ಪೋಲೀಸ್ ಕಾನ್ಸ್‌ಟೇಬಲಗಳನ್ನು ಸದರಿ ಪ್ರದೇಶದಲ್ಲಿರುವ ಒಂಭತ್ತು ಪೋಲೀಸ್ ಠಾಣೆಗಳಿಗೆ ಮಾತ್ರ ವರ್ಗಾವಣೆ ಮಾಡಲಾಗುವುದು.

12 .30 ಪಿ.ಎಂ.

SRI S. RAJENDRAN : Sir, my question is quite clear. To my question (b) whether it is a fact that KGF is facing shortage of police personnel, the reason for not filling up the vacancies, the answer given is, 'There is no shortage of police personnel strength in KGF. Action is being taken to fill up the vacant posts',

When there is no shortage, where is the necessity of filling up the Vacancies? This is contradictory.

To my question (c) 'Whether it is a fact that police Constables and head constables are working in the KGF police stations from decades without transfer; if so, the action proposed to be taken by the Government, the answer given is, 'Yes' The Head constable and police Constables working in KGF can be transferred only among the nine police stations of KGF.

This is the answer I have received from the Hon'ble Home Minister. It a person joined as a constable he will be promoted in the following order i.e., H.C., A.S.I., S.L. and he is going to retire in KGF only. Such being the case how can these policemen give protection and security to people of KGF and how can they help citizens of KGF to eke out their livelihood? MOreover, 90% of the people of KGF belong to SCs/STs. In the Annexure given to me it shows that atrocities reported on SCs/STs in KGF alone is 19, whereas it is 9 in the entire Kolar District. It shows that the police have not taken care to give more protection and security to SC/STs dominated population. There is insecurity to SCs/STs. The reason I attribute is, these police personnel have no tranfer they are living in KGF till their retirement and that is the reason they are not able to give much needed security to these SCs/STs dominated population of KGF.

MR. SPEAKER : Mr. Rajendran, what is that you want to suggest?

SRI S. RAJENDRAN : Sir, I suggest that these H.Cs, PSIs and constables they must be transferred in the entire District, of Kolar. Presently, they are being transferred from among 9 police stations of KGF only, i.e., from Robertsonpet to BEML nagar, from Urgaon to Andersonpet like that. Therefore, these policemen are not showing any interest in their day to day official duties.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಎರಡೂ ಪ್ರಶ್ನೆಗಳು ನನಗೆ ಅರ್ಥವಾಗುತ್ತದೆ. ಮೊದಲನೆಯದಾಗಿ, ಹೇಳುವುದಾದರೆ ನಾನು ಕೊಟ್ಟಿರುವ ಉತ್ತರದಲ್ಲಿ

ಯಾವುದೇ ರೀತಿಯ ಕಾಂಟ್ರಡಿಕ್ಷನ್ ಇಲ್ಲ. ಅಲ್ಲಿಗೆ ಅಗತ್ಯವಿರುವಷ್ಟು ಸಿಬ್ಬಂದಿಯನ್ನು ಮಂಜೂರು ಮಾಡಲಾಗಿದೆ. ಕೆಲವು ಹುದ್ದೆಗಳು ಖಾಲಿ ಇದ್ದು, ಅದನ್ನು ತುಂಬಲಾಗುವುದೆಂದು ಭರವಸೆ ಕೊಟ್ಟಿದ್ದೇನೆ. There is sufficient sanctioned staff. Action is being taken to fill up Vacancies. The hon'ble member should appreciate that after we came to power, ರೋಸ್ಟರ್ ಪದ್ಧತಿಯನ್ನು ಅನುಸರಿಸಿ, ಖಾಲಿಯಿರುವ ಎಲ್ಲಾ ಹುದ್ದೆಗಳನ್ನೂ ಸಹ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಅವರಿಗೆ ಭರವಸೆ ಕೊಟ್ಟಿದ್ದೇನೆ. ಎರಡನೆಯದಾಗಿ, ಅವರು ಮಾತನಾಡುತ್ತಾ ಪರಿಶಿಷ್ಠರ ಮೇಲಿನ ದೌರ್ಜನ್ಯದ ಸಾಕಷ್ಟು ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆಯೆಂದು ಹೇಳಿದರು. ಹೌದು. ಹಿಂದಿನ ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣಗಳ ಬಗ್ಗೆ ನಾನು ಹೇಳಿ ತೃಪ್ತಿ ಪಟ್ಟುಕೊಳ್ಳುವುದಿಲ್ಲ. ತಮಗೆ ಗೊತ್ತಿರುವಂತೆ ಅಲ್ಲಿರುವ ಎಸ್.ಪಿ. ಯವರೂ ಸಹ ಪರಿಶಿಷ್ಟ ಜಾತಿಯವರೇ ಆಗಿದ್ದು ಇದು ತಮಗೂ ಗೊತ್ತಿದೆ. ಇನ್ನು ಅಲ್ಲಿರುವ ಪೋಲಿಸ್ ಕಾನ್ ಸ್ಟೇಬಲಗಳು ಹೆಡ್ ಕಾನಸ್ಟೇಬಲ್ ಆಗಿ, ಎ.ಎಸ್.ಐ ಆಗಿ, ಎಸ್.ಐ. ಆಗಿ ಕೊನೆಗೆ ಪಿ.ಎಸ್. ಆಗಿ ನಿವೃತ್ತರಾಗುತ್ತಾರೆಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೋ, ಅದು ಸತ್ಯಾಂಶವೂ ಹೌದು. ಕಾನಸ್ಟೇಬಲಗಳಿಗೆ K.G.F. is a police district by itself. ಕೆ.ಜಿ.ಎಫ್.ನಲ್ಲಿರತಕ್ಕಂಥವರನ್ನು ಕೋಲಾರಕ್ಕೆ ಅಂದರೆ ಆ ವಲಯದೊಳಗೆ ಕಾನಸ್ಟೇಬಲಗಳಿಗೆ ಬರುವ ಸಂಬಳದ ಪ್ರಮಾಣ ಗಮನಿಸಿ ಅವರನ್ನು ವರ್ಗಾವಣೆ ಮಾಡಬಾರದೆಂಬುದು ಒಂದು ನೀತಿಯ ವಿಷಯವಾಗಿದೆ. ಆದರೆ, ಮಾನ್ಯ ಸದಸ್ಯರು ಆ ಕುರಿತು ಹೇಳಿರುವ ಅಂಶವನ್ನು ನಾನು ಪರಿಗಣನೆಯಲ್ಲಿಟ್ಟುಕೊಂಡು ಇದರ ಬಗ್ಗೆ ಏನಾದರೂ ಪರಿಹಾರ ಕಂಡುಹಿಡಿಯಲು ಸಾಧ್ಯವೇ ಎಂಬುದನ್ನು ಪರಿಶೀಲಿಸುವುದಾಗಿ ಭರವಸೆ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆಯವರ, ತಮ್ಮ ಪ್ರಶ್ನೆ ಸಂಖ್ಯೆ : 82(1202) ಉತ್ತರಿಸಬೇಕಾಗಿರುವ ಮಾನ್ಯ ಸಚಿವರು ನೀರಾವರಿ ಮಂತ್ರಿಗಳ ಸಭೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ಹೋಗಿರುವುದಾಗಿ ತಿಳಿಸಿದ್ದಾರೆ. ಅವರು ಸದನದಲ್ಲಿರುವ ದಿವಸ ನಾನು ಆಗ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ದೆಹಲಿಗೆ ಹೋಗಿರುವ ಅನೇಕ ಸಂದರ್ಭಗಳಲ್ಲಿ ಮುಖ್ಯಮಂತ್ರಿಗಳ ಪರವಾಗಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಮುಖ್ಯ ಮಂತ್ರಿಗಳು ಇಲ್ಲವೆಂದರೆ ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬಹುದಲ್ಲ.

ಅಧ್ಯಕ್ಷರು : ಈ ಪ್ರಶ್ನೆ ಸಣ್ಣ ನೀರಾವರಿ ಸಚಿವರಿಗೆ ಸಂಬಂಧಪಟ್ಟದ್ದಾಗಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನ ಒಂದು ವಿನಂತಿ ಏನೆಂದರೆ, ನಮಗೆ ಪ್ರಶ್ನೋತ್ತರ ಅವಧಿ ಸಿಗುವುದೇ ಅಪರೂಪ, ಪ್ರಶ್ನೋತ್ತರ ಅವಧಿಯಲ್ಲಿ ನಮ್ಮ ಪ್ರಶ್ನೆ ಬರುವುದೂ ಅಪರೂಪ ಮತ್ತು ಪ್ರಶ್ನೆ ಬಂದಾಗಲೂ ಉತ್ತರ ಹೇಳುವುದಕ್ಕೆ ಮತ್ತೊಬ್ಬ ಮಂತ್ರಿಗಳು ಜವಾಬ್ದಾರಿ

ತೆಗೆದುಕೊಳ್ಳುವುದಿಲ್ಲವೆಂದರೆ, ಅವರೇ ಬಂದು ಉತ್ತರ ಕೊಡುವುದಕ್ಕೆ ಅಂತಹ ಗಡುಸಾದಂಥ ಪ್ರಶ್ನೆ ಯಾವುದೂ ಇಲ್ಲ. ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಮುಂದಾಗಬಹುದು. ಅವರು ಬೇರೆ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದಾರೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆಗಳು ಅಪರೂಪವಾದರೂ ನಿಮ್ಮ ನಿಜರೂಪ ಇಲ್ಲಿ ಗದ್ದಲವೆದ್ದಾಗಲೆಲ್ಲಾ ನಮಗೆ ಗೋಚರವಾಗುತ್ತಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಇಂತಹುದು ಏಕೆ ವಿಳಂಬವಾಗುವುದು?

ಅಧ್ಯಕ್ಷರು : ಮಾನ್ಯ ಸಚಿವರು ಇಲ್ಲಿಗೆ ಬಂದಾಗ ತಮ್ಮ ಪ್ರಶ್ನೆಗೆ ಉತ್ತರ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಡಾ|| ಎಂ. ಪಿ. ಕರ್ಕಿ : ನಾನು ಈ ಹಿಂದೆ ಪ್ರಸ್ತಾಪಿಸಿದ್ದ ಪ್ರಶ್ನೆಗೆ ಸಂಬಂಧಿಸಿದ ಸಚಿವರು ಇಲ್ಲದ ಕಾರಣ ನಂತರ ಉತ್ತರ ಕೊಡಿಸುವುದಾಗಿ ಭರವಸೆ ಕೊಟ್ಟಿದ್ದೀರಿ, ಆ ಪ್ರಶ್ನೆಗೆ ಉತ್ತರ ಇನ್ನೂ ಬಂದಿಲ್ಲ.

ಅಧ್ಯಕ್ಷರು : ಈಗಲೂ ಅದು ಭರವಸೆಯಾಗಿಯೇ ಇದೆ, ಅದಕ್ಕೆ ನಾನು ಉತ್ತರ ತರಿಸಿಕೊಡುತ್ತೇನೆ.

ಹೇಮಾವತಿ ನಾಳೆ ಕೆಲಸದಲ್ಲಿ ಭ್ರಷ್ಟಾಚಾರ.

83 - ಶ್ರೀ ಜಿ.ಎಸ್ ಶಿವನಂಜಪ್ಪ (ಗುಬ್ಬಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ನಾಲಾ ಕೆಲಸದಲ್ಲಿ ಭ್ರಷ್ಟಾಚಾರ ನಡೆಸಿರುವರೆಂದು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿರುವರೆಷ್ಟು?

ಆ) ಯಾವ ಯಾವ ಅಧಿಕಾರಿಗಳನ್ನು ಹುದ್ದೆಗಳ ವಿವರಗಳನ್ನು ಕೊಡುವುದು.

ಇ) ಈ ಬಗ್ಗೆ ವಿಚಾರಣೆ ನಡೆದಿದೆಯೇ, ನಡೆದಿದ್ದರೆ ಯಾವ ಹಂತದಲ್ಲಿರುತ್ತದೆ. ಹಾಗೂ ವಿಚಾರಣಾ ಯಾವಾಗ ಮುಕ್ತಾಯವಾಗುತ್ತದೆ?

ಈ) ಅಮಾನತ್ತು ಆದವರು ಹುದ್ದೆಯಲ್ಲಿ ಮುಂದುವರಿಸುತ್ತಿದ್ದಾರೆಯೇ? (ವಿವರ ಕೊಡಿ)

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಹೌದು.

ಇ) ಸಿ.ಓ.ಡಿ. ವತಿಯಿಂದ ತನಿಖೆ ಹಾಗೂ ಇಲಾಖಾ ವತಿಯಿಂದ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.

ಈ) ಅನುಬಂಧ - 1ರಲ್ಲಿನ ಕ್ರ.ಸಂ. 11ರಿಂದ 21ರಲ್ಲಿನ ಅಧಿಕಾರಿಗಳು ಹುದ್ದೆಯಲ್ಲಿ ಮುಂದುವರೆಯುತ್ತಿದ್ದಾರೆ.